## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC.No.942/2024**

**CW : 01 PW: 02**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 19.01.2026**

| | | |
|---|---|---|
| ಹೆಸರು | : | ಗೋಪಾಳೆ ಪಂಡಿತ |
| ತಂದೆಯ ಹೆಸರು | : | ಮೇಗಪ್ಪ ಗೋಪಾಳೆ |
| ವಯಸ್ಸು | : | 62 |
| ಉದ್ಯೋಗ | : | ನಿವೃತ್ತ ಅಬಕಾರಿ ನಿರೀಕ್ಷಕರು |
| ವಾಸಸ್ಥಳ | : | ಕಲಬುರಗಿ |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿ: 15/10/2019 ರಿಂದ ಜುಲೈ 2024 ರವರೆಗೆ ನಾನು ಅಬಕಾರಿ ನಿರೀಕ್ಷಕನಾಗಿ ಅಬಕಾರಿ ಉಪ ಆಯುಕ್ತರ ಕಛೇರಿ ಕಲಬುರಗಿಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಪ್ರಕರಣದಲ್ಲಿ ನಾನು ದಿ: 23/08/2023 ರಂದು ಕಲಬುರಗಿ ನಗರದಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಸಾಯಂಕಾಲ 6 ಗಂಟೆ ಸುಮಾರಿಗೆ ಒಂದು ಖಚಿತ ಭಾತ್ಮಿ ಆಧಾರದ ಮೇಲೆ ಎರಡು ಪಂಚರನ್ನು ಪಂಚರನ್ನಾಗಿ ಬರಮಾಡಿಕೊಂಡಿದ್ದು ಇರುತ್ತದೆ. ಸದರಿ ಸಿಬ್ಬಂದಿಗಳೊಂದಿಗೆ ನಾನು ಕಲಬುರಗಿಯನ್ನು ಬಿಟ್ಟು ದೇವನತೆಗನೂರು ಗ್ರಾಮಕ್ಕೆ ಸಂಜೆ 7 ಗಂಟೆ ಸುಮಾರಿಗೆ ನಮ್ಮ ಸರ್ಕಾರಿ ವಾಹನ ಸಂಖ್ಯೆ ಕೆ.ಎ-32, ಜಿ-0882 ನೇದ್ದರಲ್ಲಿ ಕುಳಿತುಕೊಂಡು ಭಾತ್ಮಿ ಹೋಗಿದ್ದು ಇರುತ್ತದೆ. ಸ್ಥಳದಲ್ಲಿಯೇ ಶೋಧನ ಪತ್ರವನ್ನು ತಯಾರಿಸಿ ಸ್ಥಳೀಕರನ್ನು ಪಂಚರಾಗಲು ವಿನಂತಿಸಿಕೊಂಡಾಗ ಅದಕ್ಕೆ ಯಾರೂ ಒಪ್ಪದಿರುವ ಕಾರಣ ನಾನು ಬರಮಾಡಿಕೊಂಡ ಪಂಚರ ಸಹಿಯನ್ನು ಶೋಧನ ಪತ್ರದ ಮೇಲೆ ಪಡೆದುಕೊಂಡಿದ್ದು ಇರುತ್ತದೆ.

ನಂತರದಲ್ಲಿ ಭಾತ್ಮಿ ಸ್ಥಳವಾದ ಕಿರಾಣಿ ಅಂಗಡಿಯನ್ನು ಶೋಧನೆಗೆ ಒಳಪಡಿಸಿದಾಗ ಒಂದು ಮೂಲೆಯಲ್ಲಿ ಒಂದು ರಟ್ಟಿನ ಪೆಟ್ಟಿಗೆಯಲ್ಲಿ 90 ಎಮ್.ಎಲ್ ನ ಒರಿಜಿನಲ ಚಾಯ್ಸ ವಿಸ್ಕಿಯ ಒಟ್ಟು 96 ಟೆಟ್ರಾ ಪ್ಯಾಕಗಳು ಅಲ್ಲಿ ದೊರೆತವು. ಇವುಗಳನ್ನು ತೆಗೆದುಕೊಂಡು ನಮ್ಮ ಸಮಕ್ಷಮದಲ್ಲಿ ಜಪ್ತು ಮಾಡಿ ದೊರೆತ ಟೆಟ್ರಾ ಪ್ಯಾಕಿನಲ್ಲಿ 30 ಪಾಕೆಟುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡಿರುತ್ತೇವೆ. ನಂತರದಲ್ಲಿ ಅವುಗಳನ್ನು ಒಂದು ಬಿಳಿ ಬಟ್ಟೆಯಲ್ಲಿ ಹಾಕಿ, ದಾರವನ್ನು ಕಟ್ಟಿ ಇಲಾಖೆಗೆ ಸಂಬಂಧಪಟ್ಟ 447 ಅರಕಿನ ಮೊಹರನ್ನು ಹಾಕಿರುತ್ತೇವೆ. ಸ್ಥಳೀಯರನ್ನು ಆರೋಪಿತನ ಕುರಿತು ವಿಚಾರ ಮಾಡಿದಾಗ ಸದರಿ ಸ್ಥಳೀಯರು ಪೋಲೀಸರು ಬರುವ ಸುದ್ದಿಯನ್ನು ಕೇಳಿ ಆರೋಪಿತಳು ಓಡಿ ಹೋಗಿರುತ್ತಾಳೆ ಎಂದು ತಿಳಿಸಿರುತ್ತಾರೆ.

ಮುಂದುವರೆದು ಸ್ಥಳೀಯರನ್ನು ವಿಚಾರಿಸಲಾಗಿ ಆರೋಪಿತಳ ಹೆಸರು ಜೇನಿಬಾಯಿ ಗಂಡ ಸುಬಾಷ ರಾಠೋಡ ಇರುತ್ತದೆ ಎಂದು ತಿಳಿದು ಬಂದಿತು. ಸ್ಥಳದಲ್ಲಿಯೇ 7 ರಿಂದ 8 ಗಂಟೆವರೆಗೆ ಪಂಚನಾಮೆಯನ್ನು ಜರುಗಿಸಲಾಯಿತು. ನಂತರದಲ್ಲಿ ಕಛೇರಿಗೆ ಬಂದು ಸರ್ಕಾರಿ ತರಪೆ ಒಂದು ಫಿರ್ಯಾದಿಯನ್ನು ಆರೋಪಿತಳ ವಿರುದ್ದ ಸಲ್ಲಿಸಿದ್ದು ಇರುತ್ತದೆ. ನಂತರದಲ್ಲಿ ಪ್ರ.ವ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ.

ಈ ಹಂತದಲ್ಲಿ ಸಾಕ್ಷಿದಾರರಿಗೆ ಜಪ್ತು ಪಡಿಸಿಕೊಂಡಿರುವ 30 ಟೆಟ್ರಾ ಪ್ಯಾಕೆಟವುಳ್ಳ ಬಿಳಿ ಚೀಲವನ್ನು ನೋಡಿ ತೋರಿಸಿದ್ದು, ಒಟ್ಟಾರೆ ಬಿಳಿ ಚೀಲದ ಸಮೇತ ಅವುಗಳನ್ನು ಮು.ಮಾ.1 ಎಂದು ನಿಶಾನೆಗೊಳಿಸಲಾಯಿತು. ಸಾಕ್ಷಿದಾರರಿಗೆ ಜಪ್ತು ಪಂಚನಾಮೆಯನ್ನು ತೋರಿಸಲಾಗಿ, ಅದನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.1 (ಬಿ) ಎಂದು, ಶೋಧನಾ ಸಮುಚ್ಚಯವನ್ನು ನಿ.ಪಿ.2 ಎಂದು, ಅದರ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.2 (ಎ) ಎಂದು, ಅರಕಿನ ಗುರುತುಳ್ಳ ಮಾದರಿ ಮುದ್ರೆ ನಮೂನೆಯನ್ನು ನಿ.ಪಿ.3 ಎಂದು, ಅದರ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.3 (ಎ) ಎಂದು, ಫಿರ್ಯಾದಿಯನ್ನು ನಿ.ಪಿ.4 ಎಂದು, ಅದರ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.4 (ಎ) ಎಂದು, ಪ್ರ.ವ.ವರದಿಯನ್ನು ನಿ.ಪಿ.5 ಎಂದು, ಅದರ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.5 (ಎ) ಎಂದು ನಿಶಾನೆಗೊಳಿಸಲಾಯಿತು. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-6 ಇವರಿಗೆ ವಹಿಸಿರುತ್ತೇನೆ. ಆರೋಪಿಯು ಗೈರು ಹಾಜರಾಗಿದ್ದು, ಆತಳ ಗುರುತಿಸುವಿಕೆಗಾಗಿ ತಕರಾರು ಇರುವುದಿಲ್ಲ ಎಂದು ಆರೋಪಿ ಪರ ವಕೀಲರು ಹೇಳುತ್ತಾರೆ ಅದರಂತೆ ವಿನಾಯಿತಿ ಅರ್ಜಿಯಲ್ಲಿಯೂ ಸಹ ನಮೂದಿಸಿದ್ದು ಇರುತ್ತದೆ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ</u>**

ನಿ.ಪಿ.1 ರಲ್ಲಿ ನಾನು ಕಲಬುರಗಿ ನಗರವನ್ನು ಸಾಯಂಕಾಲ 6 ಗಂಟೆ ಸುಮಾರಿಗೆ ಬಿಟ್ಟಿರುತ್ತೇನೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ಮುಂದುವರೆದು ಸಾಕ್ಷಿದಾರರು ನನಗೆ ಮಾಹಿತಿ ಬಂದಿರುವ ಕುರಿತು ನಮೂದು ಮಾಡಿರುತ್ತೇನೆ ಆದರೆ ಕಲಬುರಗಿ ಸ್ಥಳವನ್ನು ಬಿಟ್ಟ ಬಗ್ಗೆ ಪಂಚನಾಮೆಯಲ್ಲಿ ಬರೆದಿರುವುದಿಲ್ಲ ಎಂದು ಸ್ವ ಇಚ್ಚೆಯಾಗಿ ನುಡಿಯುತ್ತಾರೆ. ನಿ.ಪಿ.1 ರಲ್ಲಿ ನಾನು ಶೋಧನಾ ಪತ್ರವನ್ನು ತಯಾರಿಸಿರುವ ವೇಳೆಯನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಘಟನಾ ಸ್ಥಳವಾದ ಕಿರಾಣಿ ಅಂಗಡಿಯ ಬಗ್ಗೆ ನಾನು ನಿ.ಪಿ.1 ರಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ.

ನಾನು ಘಟನಾ ಸ್ಥಳಕ್ಕೆ ಹೋದಾಗ ಅಲ್ಲಿ ನಾಲ್ಕು ಜನರು ನೆರೆದಿದ್ದರು. ಕಲಬುರಗಿಯಿಂದ ಶಹಾಬಾದ ಮಾರ್ಗವು ಮುಖ್ಯ ರಸ್ತೆ ಆಗಿರುತ್ತದೆ ಎಂದರೆ ಸರಿ. ನಾನು ಘಟನಾ ಸ್ಥಳದಲ್ಲಿ ಆರೋಪಿತಳ ಹೆಸರನ್ನು ಕೇಳಿದ ವ್ಯಕ್ತಿಗಳ ಆಧಾರ ಕಾರ್ಡನ್ನು ಪಡೆದುಕೊಂಡಿರುತ್ತೇನೆ ಆದರೆ ಈ ಕುರಿತು ನಾನು ನಿ.ಪಿ.1 ರಲ್ಲಿ ನಮೂದು ಮಾಡಿರುವುದಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆರೋಪಿತಳು ಯಾವ ದಿಕ್ಕಿಗೆ ಓಡಿ ಹೋದಳು ಎಂದು ನಿ.ಪಿ.1 ರಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾನು ಸ್ಥಳದಲ್ಲಿ ಪ್ರತ್ಯಕ್ಷ ಸಾಕ್ಷಿದಾರರನ್ನು ಹೇಳಿಕೆ ಪಡೆಯಲು ಪ್ರಯತ್ನಿಸಿದೆ ಆದರೆ ಅವರು ಸಹಕರಿಸಲಿಲ್ಲ ಎಂದು ಹೇಳುತ್ತಾರೆ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಯನ್ನು ಪಡೆಯಲು ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಪಶ್ಚಿಮ ದಿಕ್ಕಿನಲ್ಲಿ ಇರುವ ರಾಮಚಂದ್ರ ಅವರ ಕಿರಾಣಿ ಅಂಗಡಿ ಇರುತ್ತದೆ ಎಂದರೆ ಸರಿ. ಮುಂದುವರೆದು ಸಾಕ್ಷಿದಾರರು ಇವರ ಸಾಕ್ಷವನ್ನು ಪಡೆಯಲು ನಾನು ಪ್ರಯತ್ನ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿ.ಪಿ.1 ರಲ್ಲಿ ನಮೂದಿಸಿದ ಹಾಗೆ ಯಾವುದೇ ಪಂಚನಾಮೆಯನ್ನು ಪಂಚರ ಸಮಕ್ಷಮ ಮಾಡದೇ ಇದ್ದರೂ ಸಹಿತ ಒಂದು ಖೊಟ್ಟಿ ದಾಖಲೆಯನ್ನು ತಯಾರಿಸಿ ಆರೋಪಿತಳು ಯಾವುದೇ ತಪ್ಪನ್ನು ಮಾಡದಿದ್ದರೂ ಆಕೆಯ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಪಂಚರು ಚಿತ್ತಾಪೂರ, ಕಲಬುರಗಿಯ ಹಲವಾರು ಅಬಕಾರಿ ಪ್ರಕರಣದಲ್ಲಿ ಸಾಕ್ಷ ನುಡಿದಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿತಳು ಹಾಗೂ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ನಾನು ಒಂದು ಖೊಟ್ಟಿ ಫಿರ್ಯಾದಿಯನ್ನು ಆರೋಪಿತಳ ವಿರುದ್ಧ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮು.ಮಾ.1 ರಂತೆ ಗುಜರಿ ಅಂಗಡಿಗಳಲ್ಲಿ ದೊರೆಯುತ್ತವೆ ಎಂದರೆ ಸರಿ. ನಿ.ಪಿ.1 ರಿಂದ 5 ರಲ್ಲಿ ಬರೆದಿರುವ ಸಂಗತಿಗಳು ಖೊಟ್ಟಿ ಹಾಗೂ ಬನಾವಟಿಯಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಘಟನಾ ಸ್ಥಳವಾದ ಕಿರಾಣಿ ಅಂಗಡಿಯ ನೈಜ ಸ್ವರೂಪವನ್ನು ನಿ.ಪಿ.1 ರಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ.

**ಮರುವಿಚಾರಣೆ :** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**
**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**